**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು**

**ಸಿ.ಸಿ. 984/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಿ ಎಸ್ ಮಂಜುನಾಥ** | **ಪ್ರಮಾಣ ಮಾಡಿದ ದಿನಾಂಕ** | **26-05-2023** |
| **ತಂದೆಯ ಹೆಸರು** | **ಬಿ ಎಂ ಸುಂದರ್ ರಾಜ್** | | |
| **ವಯಸ್ಸು** | **42 ವರ್ಷ** | | |
| **ವೃತ್ತಿ** | **ಇನ್ಸ್ ಪೆಕ್ಟರ್,** | **ಚಾಸಾ** | **14** |
| **ವಾಸಸ್ಥಳ** | **ಬೆಂಗಳೂರು** | **ಪ್ರಾಸಾ** | **3** |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :-**

ದಿಃ 01-11-2018 ರಿಂದ 27-04-2022 ರವರೆಗೆ ಸಿ ಪಿ ಐ ಆಗಿ ಕಡೂರಿನ ವೃತ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14-08-2021 ರಂದು ಚಾಸಾ-13 ರವರಿಂದ ಕಡತವನ್ನು ಪಡೆದುಕೊಂಡು ಕೃತ ನಡೆದ ಸ್ದಳಕ್ಕೆ ತೆರಳಿ ಅಲ್ಲಿ ಪಂಚರಾದ ಚಸಾ-2 ಮತ್ತು 3 ರವರಿಗೆ ನೋಟೀಸು ಜಾರಿ ಮಾಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿರುತ್ತೇನೆ. ಚಾಸಾ-2 ಮತ್ತು 3 ರವರಿಗೆ ನೀಡಿನ ನೋಟಿಸನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ- 5, ಸಹಿಯನ್ನು ನಿಪಿ-5(ಎ) ಎಂದು ಗುರ್ತಿಸಲಾಯಿತು. ನಂತರ ಕೃತ್ಯ ನಡೆದ ಸ್ಥಳವನ್ನು ಚಾಸಾ-8 ರವರು ತೊರಿಸಿದ ಮೇರೆಗ ಅದೇ ದಿನ ಬೆಳಗ್ಗೆ 11 ರಿಂದ 12 ರ ವರೆಗೆ ಪಂಚನಾಮೆಯನ್ನು ಜರುಗಿಸಲಾಯಿತು. ಆ ಸಮಯದಲ್ಲಿ ಪೋಟೋ ಮತ್ತು ಕಚ್ಚಾ ನಕ್ಷೆ ತಯಾರಿಸಲಾಯಿತು. ಈಗಾಗಲೇ ಗುರುತಿಸಲಾಗಿರುವ ನಿಪಿ-1 ರಲ್ಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರ್ತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರ್ತಿಸಲಾಯಿತು.

ಈಗಾಗಲೇ ಗುರ್ತಿಸಲಾಗಿರುವ ನಿಪಿ-2 ಛಾಯಾಚಿತ್ರದಲ್ಲಿ ಸಾಕ್ಷಿ ತಾನು ಇರುವುದಾಗಿ ನೋಡಿ ಗುರ್ತಿಸಿರುತ್ತಾರೆ. ಅದೇ ದಿನ ಸಖರಾಯಪಟ್ಟಣ ಪೊಲೀಸ್ ಆವರಣದಲ್ಲಿದ್ದ ಟ್ಯಾಕ್ಟರ್ ನಂ. ಕೆಎ-46-ಟಿ -5878 ಮತ್ತು ಟ್ರೇಲರ್ ಕೆಎ-46-ಟಿ-5879 ಗಳನ್ನು ಪಂಚರಾದ 2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 12-30 ರಿಂದ 1-00 ರ ವರೆಗೂ ಅಮಾನತು ಮಹಜರ್ ಅನ್ನು ಜರುಗಿಸಿರುತ್ತೇನೆ. ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುವ ಅಮಾನತು ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಅದೇ ದಿನ ಸದರಿ ವಾಹನದ IMV ಪರೀಕ್ಷೆಗಾಗಿ ತರೀಕೆರೆಯ RTO ರವರಿಗೆ ಕೋರಿಕೆಯನ್ನು ಸಲ್ಲಿಸಿರುತ್ತೇನೆ. ಅದೇ ದಿನ ಸಾಕ್ಷಿದಾರರಾದ ಚಾಸಾ-1 ರವರ ಮರು ಹೇಳಿಕೆ ಮತ್ತು ಚಾಸಾ-8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 24-08-2021 ರಂದು ಅರಸೀಕೆರೆಯ ಜಯಚಾಮರಾಜೇಂದ್ರ ಆಸ್ಪತ್ರೆಯ ವೈದ್ಯಾದಿಕಾರಿಗಳು ಮೃತನ PM ಸಮಯದಲ್ಲಿ ಸಂಗ್ರಹಿಸಿಟ್ಟಿದ್ದ ವಸ್ತುಗಳನ್ನು ಸಿಬ್ಬಂದಿಯಾದಂ ರೇಣುಕಾಜ್ ರವರಿಂದ ಪಡೆದುಕೊಂಡು ಪೊಲೀಸ್

ಠಾಣೆ ಯಲ್ಲಿ ಮಾಲುಪಟ್ಟಿ ನಂ. 106/2021 ರಂತೆ ಅಳವಡಿಸಿಕೊಂಡಿರುತ್ತೇನೆ. ದಿಃ 27-08-2021 ರಂದು ಈ ಮೊದಲೇ ಅಮಾನತು ಪಡಿಸಿಕೊಂಡಿರುವ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಂಗಳೂರಿನ RFSL ಗೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಯು ಮಂಗಳೂರಿಗೆ RFSL ವರದಿಗಾಗಿ ಕಳುಹಿಸಿಕೊಟ್ಟ ದಾಖಲಾತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-6 ಎಂದು ಗುರುತಿಸಲಾಯಿತು. ದಿಃ 01-09-2021 ರಂದು ಚಾಸಾ-8 ರವರು ಅಪಘಾತಕೊಳಪಟ್ಟ ಟ್ರ್ಯಾಕ್ಟರ್ ಮಾಲೀಕರಿಂದ GPA ಪಡೆದುಕೊಂಡು ಠಾಣೆಗೆ ಹಾಜರಾಗಿ ಸದರಿ ಯವರಿಗೆ ಕಲಂ 133 ರ ಅಡಿಯಲ್ಲಿ ನೋಟೀಸು ಜಾರಿ ಮಾಡಿ ಉತ್ತರವನ್ನು ಪಡೆದಿರುತ್ತೇನೆ. ಸಾಕ್ಷಿಯು ಸದರಿ ನೋಟೀಸು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಸಹಿಯನ್ನು ನಿಪಿ-7(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ನೋಟೀಸಿಗೆ ನೀಡಿದ ಉತ್ತರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-8 ಎಂದು, ಸಹಿಯನ್ನು ನಿಪಿ-8(ಎ) ಎಂದು ಗುರ್ತಿಸಲಾಯಿತು. ಅದೇ ದಿನ ಅಪಘಾತಕೊಳ್ಳಪಡಿಸಿದ ಟ್ಯಾಕ್ಟರ್ ನ ಚಾಲಕನಾದ ಆರೋಪಿಯು ಠಾಣೆಗೆ ಹಾಜರಾಗಿದ್ದು ಆರೋಪಿಗೆ 41 (ಎ) ರ ಅಡಿಯಲ್ಲಿ ನೋಟೀಸು ಜಾರಿ ಮಾಡಿರುತ್ತೇನೆ. ಸಾಕ್ಷಿಯು ಸದರಿ ನೋಟೀಸನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-9 ಎಂದು, ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಅದೇ ದಿನ ಟ್ಯಾಕ್ಟರ್ ನ ತಪಾಸಣೆಯಾಗಿದ್ದು ಅದನ್ನು ಇಂಡೆಮಿನಿಟಿ ಬಾಂಡ್ ಪಡೆದು ಚಾಸಾ-8 ರವರ ವಶಕ್ಕೆ ನೀಡಿರುತ್ತೇನೆ. ದಿಃ 04-10-2021 ರಂದು ಅಪಘಾತಕೊಳ್ಳಪಟ್ಟ ವಾಹನದ IMV ವರದಿಯನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10, ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ದಿಃ 08-11-2021 ರಂದು ಮಂಗಳೂರಿನ RFSL ವರದಿಯನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ದಿಃ 22-11-2021 ರಂದು ಮೃತನ PM ವರದಿಯನ್ನು ಸ್ವೀಕರಿಸಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-

12 ಎಂದು, ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಆದೇ ದಿನ ತನಿಖೆ ಪೂರ್ಣ ಗೊಳಿಸಿ ಆರೋಪಿಯ ವಿರುದ್ದ ಸಾಕ್ಷ್ಯದಾರಗಳು ಕಂಡುಬಂದಿದ್ದರಿಂದ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನುಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲು :- ಆರೋಪಿ ಪರ ವಕೀಲರಾದ ಶ್ರೀ ಡಿ ಕೆ ಕೆ ವಕೀಲರಿಂದ</u>**

ಆರೋಪಿಯ ವಿರುದ್ದ ಯಾವುದೇ ತಪ್ಪುಗಳು ಕಂಡು ಬರದೇ ಇದ್ದರೂ ಸಹ ಆರೋಪಿಯ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರ್ ಅನ್ನು ಮಾಡಿರುವುದಿಲ್ಲಎಂದರೆ ಸರಿಯಲ್ಲ. ನಾನು ಯಾವುದೇ FSL ವರದಿಯನ್ನು ಮತ್ತು ಇತರೇ ವರದಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮೃತ ವ್ಯಕ್ತಿಮದ್ಯಪಾನ ಮಾಡಿ ಬಿದ್ದು ಪೆಟಾಗಿದ್ದರು ಸಹ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಸಾಕ್ಷಿದಾರರಿಗೆ ಯಾವುದೇ ನೋಟೀಸು ನೀಡಿರುತ್ತೇನೆ ಎಂದರೆ ಸರಿಯಲ್ಲ. ಠಾಣಾ ಅಂಕಿ ಅಂಶಕ್ಕಾಗಿ ಠಾಣೆಯಲ್ಲೇ ಕುರಿತು ವರದಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

**2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಕಡೂರು**